# ಭಕ್ತಿಯೇ ಸಾರವಸ್ತು



✸ ಜಾತಿಭೇದದ ವಿಷಯ ಕೇಳಿದೆಯಲ್ಲವೆ? ಅದನ್ನು ನಿರ್ಮೂಲ ಮಾಡಲು ಇರುವುದು ಕೇವಲ ಒಂದೇ ಮಾರ್ಗ. ಅದು ಭಕ್ತಿಮಾರ್ಗ. ಭಕ್ತರಿಗೆ ಜಾತಿ ಎಂಬುದೇ ಇಲ್ಲ. ಹೃದಯದಲ್ಲಿ ಭಕ್ತಿ ಅಂಕುರವಾಗಿಬಿಟ್ಟಿತು ಎಂದರೆ ಅಸ್ಪೃಶ್ಯ ಶುದ್ಧನಾಗಿಬಿಡುತ್ತಾನೆ– ಚಂಡಾಲನು ಚಂಡಾಲನಾಗಿ ಉಳಿದುಕೊಳ್ಳುವುದಿಲ್ಲ.

✸ ಭಕ್ತಿಯೇ ಸಾರವಸ್ತು. ವಿಚಾರದ ಮೂಲಕ ಯಾರು ತಾನೇ ಭಗವಂತನನ್ನು ಅರಿಯಬಲ್ಲರು? ನನಗೆ ಬೇಕಾಗಿರುವುದು ಭಕ್ತಿ. ಆತನ ಅನಂತ ಐಶ್ವರ್ಯದ ಸಂಬಂಧವಾಗಿ ಅರಿತುಕೊಳ್ಳಬೇಕಾದ ಆವಶ್ಯಕತೆ ಏನಿದೆ ನನಗೆ? ಒಂದು ಸೀಸೆ ಮದ್ಯವೇ ನನ್ನನ್ನು ಮತ್ತನನ್ನಾಗಿ ಮಾಡುವಾಗ ಇನ್ನು ಸೇಂದಿಯ ಅಂಗಡಿಯಲ್ಲಿ ಏನಿದೆ ನನಗೆ? ಒಂದು ತಂಬಿಗೆ ನೀರೇ ತನ್ನ ತೃಷೆಯನ್ನು ಇಂಗಿಸಿಬಿಡಬಲ್ಲದಾದ್ದರಿಂದ ಈ ಜಗತ್ತಿನಲ್ಲಿ ಒಟ್ಟು ಎಷ್ಟು ಪರಿಮಾಣ ನೀರು ಇದೆ ಎಂಬುದನ್ನು ಅರಿಯುವ ಆವಶ್ಯಕತೆಯೇನಿರದು.

✸ ಭಕ್ತಿಮಾರ್ಗವನ್ನು ಅನುಸರಿಸಿ ಮುಂದುವರಿದರೆ ಬ್ರಹ್ಮಜ್ಞಾನವನ್ನೂ ಪಡೆದುಕೊಂಡುಬಿಡಬಹುದು. ಭಗವಂತ ಸರ್ವಶಕ್ತಿಮಾನ್. ಆತ ಇಚ್ಛೆಪಟ್ಟರೆ ತನ್ನ ಭಕ್ತನಿಗೆ ಬ್ರಹ್ಮಜ್ಞಾನವನ್ನೂ ಕೊಡಬಲ್ಲ. ಆದರೆ ಭಕ್ತನಿಗೆ ಪ್ರಾಯಿಕವಾಗಿ ಬ್ರಹ್ಮಜ್ಞಾನ ಬೇಕೆಂದೆನಿಸುವುದಿಲ್ಲ. ಆತ, 'ನಾನು ದಾಸ, ನೀನು ಪ್ರಭು; ನಾನು ಮಗು, ನೀನು ತಾಯಿ' ಎಂಬ ಈ ಭಾವದಿಂದಿರಲು ಇಚ್ಛೆಪಡುತ್ತಾನೆ.

✸ ಕಾಟಾಚಾರದ ಭಕ್ತಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ. ಪ್ರೇಮಾಭಕ್ತಿಯಿಲ್ಲದೆ ಆತನ ಸಾಕ್ಷಾತ್ಕಾರ ಮಾಡಿಕೊಳ್ಳಲಾಗುವುದಿಲ್ಲ. ಪ್ರೇಮಾಭಕ್ತಿಗೆ ಇನ್ನೊಂದು ಹೆಸರು 'ರಾಗಾಭಕ್ತಿ' ಅಂತ. ಪ್ರೇಮ, ಅನುರಾಗ ಇಲ್ಲದೆ ಭಗವಂತನ ಸಾಕ್ಷಾತ್ಕಾರ ದೊರೆಯದು. ಭಗವಂತನಲ್ಲಿ ಪ್ರೀತಿ ಉಂಟಾಗದ ಹೊರತು ಆತನನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳಲಾಗುವುದಿಲ್ಲ.

✸ ಪ್ರೀತಿ, ಈ ರಾಗಾಭಕ್ತಿ ಉಂಟಾಯಿತು ಎಂದರೆ, ಹೆಂಡತಿ, ಮಕ್ಕಳು, ಸ್ವಬಾಂಧವರು ಇವರ ಮೇಲೆ ಮನುಷ್ಯನಿಗಿರುವ ಮಾಯಾಪ್ರೇರಿತ ಆಕರ್ಷಣೆ ಇರದು. ಅವರ ಕಡೆಗೆ ಆತನಲ್ಲಿ ದಯೆ ಮಾತ್ರ ಉಳಿದಿರುತ್ತದೆ, ಈ ಜಗತ್ತು ವಿದೇಶವಾಗಿ ತೋರಿಬರುತ್ತದೆ. ಕೇವಲ ಕರ್ಮಭೂಮಿಯಾಗಿ ಕಂಡುಬರುತ್ತದೆ. ಇದು ಹಳ್ಳಿಯಲ್ಲಿ ಸ್ವಂತ ಮನೆ ಇದ್ದು ಕಲ್ಕತ್ತಕ್ಕೆ ಕೆಲಸಕ್ಕೆ ಬರುವ ಹಾಗೆ. ಬಂದವರು ಕೆಲಸದ ಸಲುವಾಗಿ ಬಾಡಿಗೆ ಮನೆ ಮಾಡಿಕೊಳ್ಳಬೇಕಾಗುತ್ತದೆ. ಭಗವಂತನಲ್ಲಿ ಪ್ರೀತಿ ಉಂಟಾಯಿತು ಎಂದರೆ, ಸಂಸಾರಾಸಕ್ತಿ, ವಿಷಯಬುದ್ಧಿ, ಒಮ್ಮೆಗೇ ತೊಲಗಿ ಹೋಗುತ್ತವೆ.

✸ ಕಲಿಯುಗಕ್ಕೆ ಭಕ್ತಿಯೋಗವೇ ಶ್ರೇಯಸ್ಕರವಾದ್ದು. ಭಕ್ತಿಯಿಂದಲೇ ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. ದೇಹಬುದ್ಧಿ ಇತ್ತು ಎಂದರೆ, ವಿಷಯಬುದ್ಧಿ ಇದ್ದೇ ಇರುತ್ತದೆ. ರೂಪ, ರಸ, ಗಂಧ, ಸ್ಪರ್ಶ, ಶಬ್ದ — ಇವು ವಿಷಯಗಳು. ವಿಷಯಬುದ್ಧಿ ಹೋಗಬೇಕಾದರೆ ಬಹಳ ಕಷ್ಟ. ವಿಷಯಬುದ್ಧಿ ಇರುವವರೆಗೆ 'ಸೋಽಹಮ್' ಭಾವ ಉಂಟಾಗದು.

✸ ಮುಖ್ಯವಾಗಿ ಮಾಡಬೇಕಾದ್ದು ಭಗವಂತನನ್ನು ಪ್ರೀತಿಸುವುದು, ಆತನ ಮಾಧುರ್ಯವನ್ನು ಸವಿಯುವುದು. ಆತ ರಸ, ಭಕ್ತ ಆಸ್ವಾದಕ. ಭಕ್ತ ಭಗವದಾನಂದವನ್ನು ಸವಿಯುತ್ತಾನೆ. ಆತ ತಾವರೆ ಹೂವು. ಭಕ್ತ ದುಂಬಿ. ಭಕ್ತ ತಾವರೆ ಹೂವಿನ ಮಧುವನ್ನು ಹೀರುತ್ತಾನೆ.

✸ ಭಗವಂತನಿಲ್ಲದೆ ಭಕ್ತನಿರಲಾರದ ಹಾಗೆ, ಭಕ್ತನಿಲ್ಲದೆ ಭಗವಂತನೂ ಇರಲಾರ. ಆಗ ಭಕ್ತ ರಸವಾಗುತ್ತಾನೆ, ಭಗವಂತ ಆಸ್ವಾದಕನಾಗುತ್ತಾನೆ. ಭಕ್ತ ತಾವರೆ ಹೂವು ಆಗುತ್ತಾನೆ, ಭಗವಂತ ದುಂಬಿಯಾಗುತ್ತಾನೆ. ಭಗವಂತ ತನ್ನ ಮಾಧುರ್ಯವನ್ನು ತಾನೇ ಆಸ್ವಾದಿಸಲೋಸುಗ ಎರಡಾಗಿದ್ದಾನೆ. ಈ ಕಾರಣದಿಂದಲೇ ರಾಧಾಕೃಷ್ಣ ಲೀಲೆ.

✸ ಆಧ್ಯಾತ್ಮಿಕ ಜೀವನದ ಮೊದಮೊದಲಲ್ಲಿ ತೀರ್ಥಯಾತ್ರೆ, ಕೊರಳಿಗೆ ರುದ್ರಾಕ್ಷಿ ಅಥವಾ ತುಳಸಿಮಾಲೆ, ಮಡಿ — ಇವನ್ನೆಲ್ಲಾ ಆಚರಿಸಬೇಕು. ವಸ್ತುಲಾಭವಾಯಿತೆಂದರೆ, ಭಗವದ್ದರ್ಶನ ದೊರೆಯಿತು ಎಂದರೆ ಬಾಹ್ಯಾಡಂಬರ ಕ್ರಮೇಣ ಕಡಿಮೆಯಾಗಿಬಿಡುತ್ತದೆ. ಬಳಿಕ ಉಳಿದುಕೊಳ್ಳುವ ಕೆಲಸ ಆತನ ನಾಮಜಪ ಮಾಡುವುದು ಮತ್ತು ಸ್ಮರಣ ಮನನ.

ಶ್ರೀರಾಮಕೃಷ್ಣ ವಚನವೇದದಿಂದ